ಆಫಿಸ್ ಹೆಸರು.	ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವ ಗೈರೆ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವ ಗೈರೆ.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಂಮತು.
ಚಿಂತಾಮಣಿ	23 1892—93	ಚಿಕ್ಕ ಬಳ್ಳಾಪುರದಲ್ಲಿರುವ ಸ್ಮಾರ್ತ ಬ್ರಾಹ್ಮಣ ದೇಶಕುಲಕರಣಿ ನೂರಪ್ಪನವರ ಕೊಮಾರ ಚಿತಾರಾಮಪ್ಪ	ಚಿತ್ತೂರು ಜಿಲ್ಲಾ ಪುಂಗನೂರು ತಾಲ್ಲೂಕು ಚಂಬುಕೂರುನಲ್ಲಿರುವ ಬ್ರಾಹ್ಮಣ ಭಾಸ್ಕರಪ್ಪನವರ ಕೊಮಾರ ಲಕ್ಷ್ಮೀನಾರಣಪ್ಪ	1892ನೇ ಇಸವಿ ಫಿಬ್ರವರಿ ತಾರೀಖು 6ರಲ್ಲು	1892ನೇ ಇಸವಿ ಜೂಲೈ ತಾರೀಖು 3ರಲ್ಲು ರಿಜಿಸ್ಟರ್ ಆಗಿಧೆ	999 ರೂಪಾಯಿನ ಜಮ್ಮಿ ಆಧಾರ ಪತ್ರ
ಬಾಗೇಪಲ್ಲಿ	2 1892—93	ಜೇಳೂರು ಹೋಬಳಿ ಪುತೂರು ವಾಸಸ್ಥರಾದ 1 ಗೆರಿಗೆ ಅಪ್ಪೇನು ಮಗ ಗಂಗಪ್ಪ 2 ಗೆರಿಗೆ ವೆಂಕಟಪ್ಪನಹೆಂಡತಿ ರಾಮಕ್ಕ 3 ಗೆರಿಗೆ ಸುಬ್ಬರಡ್ಡಿ ಮಗ ಅಯ್ಯಪ್ಪ 4 ವೇಮಂಣ 5 ಮದ್ದಂಣ	ಜೇಳೂರು ಹೋಬಳಿ ಕೇರುರ್ಖಾ ಕೋಟೆ ವಾಸಸ್ಥಾನದ ವಕ್ಕಲಿಗ ದೊಡ್ಡ ಬಂಟ್ರೋತನ ಮಗ ತಿಮ್ಮಣ್ಣ	1892ನೇ ಇಸವಿ ಜುಲೈ ತಾರೀಖು 7ರಲ್ಲು	ಈ ದಸ್ತೈವೆಜು ತಿರಸ್ಕರಿಸಿ ಇಧೆ 31ನೇ ಆಗಸ್ಟ್ 92ನೇ ಇಸವಿ	ಜೇಳೂರು ಹೋಬಳಿ ಕೇರುರ್ಖಾ ಕೋಟೆ ದೊಡ್ಡಕೆರೆಲಿ ಕಲ್ಲುಕಟ್ಟಿದ ಕಪಿಲೆ ಬಾವಿಯನ್ನ 65 ರೂಪಾಯಿಗೆ ಖರೀದಿ ಮಾಡಿರುವದಾಗಿ
ಗುಡಿಬಂಡೆ	28 1892—93	ಗುಡಿಬಂಡೆ ಹೋಬಳಿ ಬಿಷ್ಟಲಹಳ್ಳೀಲಿರುವ ಅಂಚೆ ಪೋತಲಯ್ಯನ ಮಗ ತಳವಾರ ನರಶಿಗ	ಚಿಕ್ಕತಮ್ಮನಹಳ್ಳಿಯಲ್ಲಿರುವ ವರದರಡ್ಡಿ ಮಗ ವಕ್ಕಲಿಗ ಗೊರ್ಲರಡ್ಡಿ	1892ನೇ ಇಸವಿ ಅಕ್ಟೋಬರ್ ತಾರೀಖು 13ರಲ್ಲು	1892ನೇ ಇಸವಿ ನವಂಬರು ತಾ|| 11ರಲ್ಲು ರಿಜಿಸ್ಟರ್ ಆಗಿಧೆ	200 ರೂಪಾಯಿನ ಭೂಸ್ಥಿತಿ ಕ್ರಯದ ದಸ್ತೈವಜ

ಅಬ್ದುಲ್‌ಅಜೀಜ್,
ಫಾರ್ ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 27ನೇ ಫಿಬ್ರವರಿ 1895.

ಬೆಂಗಳೂರು ಮುನಸಾರ್ತೆಪ್ಯಾಟೆ ವಾಸಸ್ಥನಾದ ಹಕೀಂ ಮಹಮ್ಮದ್ ಇಸೂಫ್‌ಸಾಹೆಬ್ ಎಂಬುವರೆ ನಿಕಾ ಹೆಂಡತಿಯಾದ ಇಮಾಂಬಿ ಯಂಬುವಳು 1895ನೇ ಇಸವಿ ಫೆಬ್ರವರಿ ಮಾಹೆ 17ನೇ ತಾರೀಖು ಭಾನುವಾರದ ರಾತ್ರಿ 10 ಘಂಟೆ ಮೇಲೆ ಬೆಳಗಿನ 6 ಘಂಟೆ ವಳಗಾಗಿ ಈ ಕೆಳಗೆ ನಮೂದಿಸಲ್ಪಟ್ಟ ಹುಡುಗಿಯರನ್ನು ಮತ್ತು ಸುಮಾರು ಆರುಸಾವಿರ ರೂಪಾಯಿ ಕ್ರಯಬಾಳತಕ್ಕ ಬೆಳ್ಳಿ ಭಂಗಾರದ ವಡವೆಗಳನ್ನು ನೋಟುಗಳನ್ನು ಕಳವು ಮಾಡಿಕೊಂಡು ಯಲ್ಲಿಯೋ ಹೋಗಿರುತ್ತಾಳೆಂದು ಫಿರ್ಯಾದ್ ಆಗಿರುವ ಸಂಗತಿಯಲ್ಲಿ ಪತ್ತೆ ಮಾಡುವದಕ್ಕೆ ಸರಿಯಾದ ಖಾತ್ರಿ ಕೊಟ್ಟವರಿಗೆ 300 ರೂಪಾಯಿಗಳ ಇನಾಮನ್ನು ಕೊಡಲು ಫಿರ್ಯಾದಿ ಹಕೀಂ ಮಹಮ್ಮದ್ ಇಸೂಫ್‌ಸಾಹೆಬರು ಪ್ರಿರುತ್ತಾರೆ.

1ನೇ ಇಮಾಂಬಿ ಎಂಬುವಳ ಚಹರೆಪಟ್ಟಿ.

ಮಹಮ್ಮದ ಇಸೂಫ್‌ಸಾಹೆಬರವರ 2ನೇ ನಿಕಾ ಹೆಂಡತಿ—45 ವರುಷ ವಯಸ್ಸು ಕೆಂಪು ಬಣ್ಣ ಕುಳ್ಳಗೆ ದಪ್ಪವಾಗಿದ್ದಾಳೆ ಸುಮಾರು 5 ಅಡಿ ಎತ್ತರ ಹಣೆ ಮೇಲೆ ಅವರೇಬೇಳೆ ಅಗಲ ಘಾಯದ ಗುರ್ತು ಇಧೆ. ಯಡಗಡೆ ಕಿವಿಯು ಹರದುಹೋಗಿ ಪುನಹ ಕೇರಿ ಕೊಂಡು ಮೋಟುಗಿ ಕಾಣುತ್ತೆ, ನೋಟಕ್ಕೆ ಕಮ್ಮಿ ವಯಸ್ಸಿನವಳಂತೆ ಕಾಣುತ್ತಾಳೆ ತಲೆಕೂದಲು ನರತಿಲ್ಲಾ ಕನ್ನಡ, ತೆಲುಗು, ಹಿಂದುಸ್ಥಾನಿ, ತಮಳು ಮಾತನಾಡುತ್ತಾಳೆ ಕೆಲವು ವ್ಯಾಳೆಗಳಲ್ಲಿ ಹಿಂದು ಜನಗಳ ಡ್ರೆಸ್ಸುಗಳನ್ನು ದರಿಸಿಕೊಳ್ಳುತ್ತಾಳೆ, ಈಕೆಯು ದಂಡಿನಲ್ಲಿ ಮಿಠಾಯಿ ಅಂಗಡಿ ಇಟ್ಟಿದ್ದ ಖಾದರ್‌ಸಾಬ್ ಯಂಬುವನ ಮದುವೆಯಾದ ಹೆಂಡತಿಯಾಗಿದ್ದಳು, ಈತನು ಸುಮಾರು 30 ವರುಷದ ಹಿಂದೆ ಮೃತಪಟ್ಟು ಹೋದನು, ಈತನ ನಂತರ ಹಿಂದುಸ್ಥಾನಿ ಸೈಯದ್ ಇನಾಯತ್ ಅಲ್ಲಿ ಯಂಬವನು ಇವಳನ್ನು ಯರಡು ಮೂರು ವರುಷ ಮಡಗಿಕೊಂಡಿದ್ದನು, ನಂತರ ಇವನು ಸತ್ತುಹೋದನು, ತರುವಾಯ ಹಕೀಂ ಮಹಮ್ಮದ್ ಇಸೂಫ್‌ ಸಾಹೆಬರು ನಿಕಾಮಾ

ಡಿಕ್ಕೊಂಡು ಆ ಲಾಗಾಯತು ಮನೆಯಲ್ಲಿ ಇಟ್ಟುಕೊಂಡು ಇದ್ದರು. ಇವಳಿಗೆ 1—2ನೇ ಗಂಡಂದರಿಗಾಗಲಿ ಅಥವಾ ಇಸೂಫ್ ಸಾಹೆಬರವರಿಗೆ ಆಗಲಿ ಮಕ್ಕಳು ಹುಟ್ಟಲಿಲ್ಲ, ಮತ್ತು ಮಕ್ಕಳೇ ಆಗಿಲ್ಲ. ಈಕೆಯು ಹಕೀಂ ಮುಹಮ್ಮದ್ ಇಸೂಫ್ ಸಾಹೆಬರವರ ಮನೆಯಲ್ಲಿರುವಾಗ್ಯೆ ಹೈದರಾಬಾದಿಗೆ ಹೋಗಿ ವಾಸಮಾಡಬೇಕೆಂದು ಆಗಾಗ್ಯೆ ಹೇಳುತ್ತಿದ್ದಳು.

2ನೇ ಸೈದಾಬಿ ಅಡ್ಡಹೆಸರು "ಮನ್ನಿಯ" ಎಂಬುವಳ ಚಹರೆಪಟ್ಟಿ.

ಈಕೆಯು ಹಕೀಂ ಮುಹಮ್ಮದ್ ಇಸೂಫ್ ಸಾಹೆಬರಿಗೆ ಸೊಸೆ, ಇವರ ಹಿರಿ ಹೆಂಡತಿಯ 2ನೇ ಮಗನಾದ ಮುಹಮ್ಮದ್‌ಖಾಸಿಂ ಎಂಬವನ ಹೆಂಡತಿ. ಸುಮಾರು 12—13 ವರುಷ ವಯಸ್ಸು ಕೆಂಪು ಬಣ್ಣ ಮುಖದ ಮೇಲೆ ಸುಮಾರಾಗಿ ಶಿಡಬಿನ ಗುರ್ತಿದ್ದೆ ಗುಂಡು ಮುಖ ಕುಳ್ಳಾಗಿದ್ದಳೆ—ಬೆಳವಿಗೆ ಹುಡಗಿಯಾಗಿದ್ದಳೆ, ಈ ಹುಡಗಿಯು ತಂದೆ ತಾಯಿಗಳು ಬೆಂಗಳೂರು ತಾಲ್ಲೂಕು ಪರಪನಗರು ವೆಂಬ ಗ್ರಾಮದಲ್ಲಿ ವಾಸವಾಗಿದ್ದಾರೆ, ತಂದೆ ಹೆಸರು ಸೈಯದ್ ಹರ್ಸೆ, ಹುಡುಗಿ ಮನೆಬಿಟ್ಟು ಹೋಗುವಾಗ್ಯೆ ರುತುಮತಿಯಾಗಿರಲಿಲ್ಲ ನೋಡಿದರೆ ದೊಡ್ಡವಳಾದ ಹಾಗೆ ಕಾಣುತ್ತಾಳೆ, ಕನ್ನಡ, ತೆಲುಗು, ಹಿಂದುಸ್ಥಾನಿ ಮಾತನಾಡುತ್ತಾಳೆ.

3ನೇ ಖಮರು ಎಂಬುವಳ ಚಹರೆಪಟ್ಟಿ.

ಇವಳು ತಂದೆತಾಯಿ ಇಲ್ಲದ ಪರದೇಶಿ ಹುಡುಗಿಯು, ಇವಳನ್ನ ಹಕೀಂ ಮುಹಮ್ಮದ್ ಇಸೂಫ್ ಸಾಹೆಬರು ಸಾಕಿಕೊಂಡಿದ್ದರು ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಳು, ವಯಸ್ಸು 10 ವರುಷ, ಯಣಗೆಂಪು, ತೆಳ್ಳಗೆ ಇದ್ದಾಳೆ ಕೋಲು ಮುಖ ಹಿಂದಗಡೆ ಕೂದಲು ಕತ್ತರಿಸಿದೆ, ಸೊಂಟದಲ್ಲಿ ಹುಂಜಿನಕಲೆ ಬೆಳ್ಳಗೆ ಕಾಣುತ್ತೆ, ತೆಲಗು, ಕನ್ನಡ, ಹಿಂದುಸ್ಥಾನಿ ಮಾತನಾಡುತ್ತಾಳೆ, ಇವಳನ್ನು 2 ವರುಷದ ಕೆಳಗೆ ವಾಗಟಪ್ಪ ವಗೈರೆ ಜನರು ಜೋರಿಮಾಡಿಕೊಂಡು ಹೋಗಿದ್ದರು, ನಂತರ ಹುಡಿಗಿಯು ಕೋಲಾರದಲ್ಲಿ ಸಿಕ್ಕಿ ತಪ್ಪಿಸ್ತರು ನ್ಯಾಯಕ್ಕೆ ಗುರಿಮಾಡಲ್ಪಟ್ಟರು.

ಎಸ್. ನರಸಿಂಹಯ್ಯಂಗಾರ್,
ಫಾರ್ ಸೂಪರ್‌ಟೆಂಡೆಂಟ್ ಆಫ್ ಪೊಲೀಸ್.

ತುಮಕೂರು ಡಿಸ್ಟ್ರಿಕ್ಟ್, ಡಿಸ್ಟ್ರಿಕ್ಟ್ ಫಂಡ್ ಬೋರ್ಡ್ ಮೆಂಬರುಗಳ ಪ್ರೊಸೀಡಿಂಗ್ಸ್.

1895ನೇ ಇಸವಿ ಫಿಬ್ರವರಿ ತಾರೀಖು 12ರಲ್ಲು ಹಾಜರಾಗಿದ್ದವರು.

ಸರ್ಕಾರದ ಉದ್ಯೋಗಸ್ಥರು.		ಇತರರು.
1. ಪ್ರೆಸಿಡೆಂಟ್—ಬಿ. ಕೆ. ವೆಂಕಟವರದಯ್ಯಂಗಾರ್ರು		1. ಮೆಸ್ಸರ್ ಎ. ರಾಮದಾಸಪ್ಪನವರ
2. ಎಗ್ಜಿಕ್ಯುಟಿವ್ ಇಂಜಿನೀಯರ್	ಸಿ. ಟಿ. ಡಲಾಲ್, ಎಸ್‌ಕ್ವಯರ್, ಎಲ್. ಸಿ. ಇ.	2. ಮೆಸ್ಸರ್ ಗಂಗಣ್ಣಶಟ್ಟರು
3. ತುಮಕೂರು ತಾಲ್ಲೂಕು ಅಮಲ್ದಾರ್ರು	ಮೆಸ್ಸರ್ ಬಿ. ರಾಮಸ್ವಾಮಯ್ಯನವರು, ಬಿ. ಏ.	3. ಮೆಸ್ಸರ್ ಚಿಕ್ಕಣ್ಣಶಟ್ಟರು
4. ಮದ್ದಗಿರಿ ತಾಲ್ಲೂಕು ಅಮಲ್ದಾರ್ರು	ಮೆಸ್ಸರ್ ಕೆ. ಶೇಷಂತಯ್ಯನವರು	4. ಮೆಸ್ಸರ್ ಶ್ರೀನಿವಾಸತಾತಾಚಾರ್ರವರು
5. ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಅಮಲ್ದಾರ್	ಮೆಸ್ಸರ್ ಕೆ. ಕಂಠೀರವಾಚಾರ್ರವರು	5. ಮೆಸ್ಸರ್ ಅಬೀದಲ್ಲಿಸಾಹೇಬರವರು
6. ಗುಬ್ಬಿ ತಾಲ್ಲೂಕು ಅಮಲ್ದಾರ್ರವರು	ಮೆಸ್ಸರ್ ಏ. ಶೇತಾರಾಮಯ್ಯನವರು	6. ಮೆಸ್ಸರ್ ಆಗಳಿಕೃಷ್ಣಪ್ಪನವರು
7. ಶಿರಾ ತಾಲ್ಲೂಕು ಅಮಲ್ದಾರ್ರು	ಮೆಸ್ಸರ್ ಎ. ವೇದಾಂತದೇಶಿಗಂ ಅಯ್ಯಂಗಾರ್ರವರು	
8. ಕುಣಿಗಲ್ ತಾಲ್ಲೂಕು ಅಮಲ್ದಾರ್ರು	ಮೆಸ್ಸರ್ ವಿ. ಪಾರ್ಥಸಾರಥಯ್ಯಂಗಾರ್ರವರು	
9. ಜನರಲ್ ಅಸಿಸ್ಟೆಂಟ್ ಕಮ್ಮಿಷನರವರು	ಎ. ರಾಘವೇಂದ್ರರಾವ್ ಎಸ್‌ಕ್ವಯರ್	
10. ತುಮಕೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜನ್ ಸಾಹೇಬರವರು	ಟಿ. ಟಿ. ನಂಜಪ್ಪ ಎಸ್‌ಕ್ವಯರ್ ಎಮ್. ಬಿ., ಸಿ. ಎಮ್.	
11. ತಿಪಟೂರು ತಾಲ್ಲೂಕು ಅಮಲ್ದಾರ್ರು	ಮೆಸ್ಸರ್ ವೈ. ನರಸಿಂಹ್ಯಯ್ಯನವರು	

ಗೈರುಹಾಜರ್.

12. ಪಾವಗಡ ತಾಲ್ಲೂಕು ಅಮಲ್ದಾರ್ರು	ಮೆಸ್ಸರ್ ಆರ್. ರಾಘವೇಂದ್ರರಾಯರವರು, ಜಮಾಬಂದಿ ಕೆಲಸದಲ್ಲಿ ವ್ಯಾಪ್ತರಾಗಿರುತ್ತಾರೆ	7. ಮೆಸ್ಸರ್ ಸೈಯದ್ ಮುಸ್ತಫಾಸಾಹೇಬರವರು ಕಾಯಿಲೆಯಾಗಿರುವದಾಗಿ ಬರಸಿರುತ್ತಾರೆ.

1. ತುಮಕೂರು ಆಸ್ಪತ್ರೆಯಲ್ಲಿ ಕಂಪೌಂಡರ್ ತಲಬಿಗೆ 2 ರೂಪಾಯಿ ಇಜಾಫೆ ಆಗಬೇಕೆಂತ ಶಿಫಾರಸುನಿಸಿ ಅಸಿಸ್ಟೆಂಟ್ ಸರ್ಜನ್‌ರವರು ಬರಸಿದ್ದ ಯಿದೇ ಇಸವಿ ಜನವರಿ 27ನೇ ನುರಳೂಂ 438ನೇ ನಂಬರ್ ಲೆಟರು ಓದಲ್ಪಟ್ಟತು.

ಈ ವಿಚಾರದಲ್ಲಿ ಪ್ರೆಸಿಡೆಂಟರವರಿಂದ ಮಾಡಲ್ಪಟ್ಟ ಪರಾ—ಈ ನೌಕರ್ರ ಹಾಲಿ ತಲಬು 8 ರೂಪಾಯಿ. ಡಿಸ್ಟ್ರಿಕ್ಟ್ ಫಂಡು ಬಡ್ಜಟ್‌ನಲ್ಲಿ ಹತ್ತು ರೂಪಾಯಿ ದಾಖಲಾಗಿದೆ. 1892ನೇ ಸಾಲ್‌ನಲ್ಲಿ ಬದಸ್ತೂರು ಶಿಫಾರಸು ಆಗಿದ್ದಾಗ್ಯೆ ಅದೇ ಇಸವಿ ಡಿಸೆಂಬರು 23ನೇ